# ಎಂಎಸ್‌ಎಂಇಗಳಿಗೆ ಡಿಜಿಟಲ್ ಪ್ಲಾಟ್‌ಫಾರಂಗೆ ಚಾಲನೆ

ಬೆಂಗಳೂರು – ನೋಂದಾಯಿತ ಕ್ರೆಡಿಟ್ ರೇಟಿಂಗ್ ಏಜೆನ್ಸಿಯಾಗಿರುವ ಬ್ರಿಕ್‌ವರ್ಕ್ ರೇಟಿಂಗ್ಸ್‌ನ ಒಡೆತನದಲ್ಲಿರುವ ಬ್ರಿಕ್‌ವರ್ಕ್ಸ್ ಅನಾಲಿಟಿಕ್ಸ್ ಎಂಎಸ್‌ಎಂಇ1 ಡಿಜಿಟಲ್ ವೇದಿಕೆಯನ್ನು ಆರಂಭಿಸಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಎಲ್ಲ ರೀತಿಯ ಡಿಜಿಟಲ್ ಸೇವೆಯನ್ನು ಒದಗಿಸಲಿದೆ. ಎಂಎಸ್‌ಎಂಇ ಪರ್ಫಾರ್ಮೆನ್ಸ್ ಗ್ರೇಡಿಂಗ್, ಡ್ಯೂಡಿಲಿಜೆನ್ಸ್, ಬಿಡಬ್ಲ್ಯುಎ ಪ್ರಮಾಣಿತ ಸರ್ಟಿಫಿಕೇ?ನ್ ಮತ್ತು ಕಂಪೆನಿ ಪ್ರೊಫೈಲಿಂಗ್‌ಇದರಲ್ಲಿ ಸೇರಿದೆ.

ತಾಂತ್ರಿಕವಾಗಿ ಮುಂದುವರೆದಿರುವ ಈ ಡಿಜಿಟಲ್ ವೇದಿಕೆ, ಎಲ್ಲ ಸಮಯದಲ್ಲಿಯೂ ವೆಬ್ ಮೂಲಕ ಸೇವೆಗೆ ಲಭ್ಯವಿದ್ದು, ಬಳಕೆದಾರರಿಗೆ ಅನುಕೂಲಕರವಾದ ಮತ್ತು ಕೊಡುಗೆ ಖರೀದಿಯಿಂದ ದಾಖಲೆಗಳನ್ನು ಅಪ್‌ಲೋಡ್ ಮಾಡುವುದರಿಂದ ಪರಿಪೂರ್ಣ ವರದಿ ಪಡೆಯುವವರೆಗೂ ಕಾಗದ ರಹಿತ ಅನುಭವವನ್ನುಒದಗಿಸುತ್ತದೆ.

ಬ್ರಿಕ್‌ವರ್ಕ್ ಅನಾಲಿಟಿಕ್ಸ್ ಗ್ರೇಡಿಂಗನ್ನು ಸ್ವತಂತ್ರವಾಗಿ ಪ್ರಮಾಣಿಸಿ, ಮೌಲ್ಯಮಾಪನಗೊಳಿಸಿ, ಉದ್ಯಮಗಳ ಕಾರ್ಯಕ್ಷಮತೆ, ಆರ್ಥಿಕ ಮತ್ತು ನಿರ್ವಹಣೆ ಸಾಮರ್ಥ್ಯವನ್ನು ವಿಶ್ಲೇಷಿಸಲಾಗುತ್ತದೆ. ಕಂಪೆನಿಯ ಒಟ್ಟಾರೆ ಕ್ರೆಡಿಟ್ ಸಾಮರ್ಥ್ಯವನ್ನುಇದರ ಮೂಲಕ ಅಳೆಯಲಾಗುವುದು.